KAHS200013782022

**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆಲೂರು</u>**

ಉಪಸ್ಥಿತರುಃ- ಶ್ರೀಮತಿ ಸ್ನೇಹಾ ಎಂ.
ಬಿ.ಎ.,ಎಲ್ಎಲ್.ಬಿ.,
ಸಮವೃತ್ತಿಃ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಆಲೂರು.

**<u>ಸಿ.ಸಿ.ಸಂಖ್ಯೆ.480/2022</u>**

**ದಿನಾಂಕಃ 05ನೇ ಆಗಸ್ಟ -2025**

| | |
|---|---|
| ಪಿರ್ಯಾದುದಾರರುಃ | ಕರ್ನಾಟಕ ಸರ್ಕಾರದ ಪರವಾಗಿ,<br>ಠಾಣಾಧಿಕಾರಿಗಳು, ಆಲೂರು<br>ಪೋಲೀಸ್ ಠಾಣೆ, ಆಲೂರು.<br><br>(ಸಹಾಯಕ ಸರ್ಕಾರಿ ಅಭಿಯೋಜಕರು) |
| | –ವಿರುದ್ಧ– |
| ಆರೋಪಿ | ಶೇಖರ್ ಬಿನ್ ದೇವಗಂಗಯ್ಯ<br>ಸುಮಾರು 44 ವರ್ಷ ವಯಸ್ಸು, |

ವಾಸಃನಾಕಲಗೂಡು ಗ್ರಾಮ,
ಕಸಬಾ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

(ಆರೋಪಿಗಳ ಪರ ಶ್ರೀ.**ಕೆ.ಜಿ.ಎನ್.**, ವಕೀಲರು)

1. ಅಪರಾಧ ಘಟಿಸಿದ ದಿನಾಂಕಃ 21.07.2022
2. ಅಪರಾಧ ವರದಿಯಾದ ದಿನಾಂಕಃ 24.07.2022
3. ಆರೋಪಿಸಲಾದ ಕಲಂಗಳುಃ ಭಾರತೀಯ ದಂಡ ಸಂಹಿತೆ ಕಲಂ 506, 323, 324, 427, 506
4. ವಿಚಾರಣೆ ಪ್ರಾರಂಭವಾದ ದಿನಾಂಕಃ 17.07.2025
5. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕಃ 17.07.2025
6. ತೀರ್ಪು ನೀಡಿದ ದಿನಾಂಕಃ 05.08.2025
7. ಪೀಠಾಸೀನಾಧಿಕಾರಿಗಳ ಅಭಿಪ್ರಾಯಃ ಆರೋಪಿಯನ್ನು ನಿರ್ದೋಷಿ ಎಂದು ಪರಿಗಣಿಸಿದೆ.

**– ತೀರ್ಪು –**

ಈ ಪ್ರಕರಣವನ್ನು ಆಲೂರು ಪೋಲೀಸ್ ಠಾಣೆಯವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 427, 323, 324 ಮತ್ತು 506 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತು ದಾಖಲಿಸಿರುತ್ತಾರೆ.

2. **ಪ್ರಕರಣದ ವಸ್ತುಸ್ಥಿತಿಯ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತೆ ಇರುತ್ತದೆಃ**

ದಿನಾಂಕಃ 21.07.2022 ರಂದು ಸಂಜೆ ಸುಮಾರು 5.30 ಗಂಟೆಯ ಸಮಯದಲ್ಲಿ ಆಲೂರು ಪೋಲಿಸ್ ಠಾಣೆಗೆ ಸೇರಿದ ಇಮ್ಮಟಿಪುರ ಗ್ರಾಮದ ಚಾಸಾ–1 ರವರ ಮನೆಯ ಮುಂದಿನ ಖಾಲಿ ಜಾಗದಲ್ಲಿ ಚಾಸಾ–1 ಮತ್ತು 2 ರವರು ಮಾತನಾಡುತ್ತಾ ನಿಂತಿದ್ದಾಗ ಅಲ್ಲಿಗೆ ಬಂದ ಆರೋಪಿಯು ಚಾಸಾ–1 ರವರಿಗೆ ನೀವು ನಮಗೆ ಮಧ್ಯ ಕುಡಿಸು ಎಂದು ಎಷ್ಟು ಸಾರಿ ಕೇಳಿದರೂ ಹಣವಿಲ್ಲ ಎಂದು ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದ್ದು ಅಲ್ಲಿಯೇ ನಿಂತಿದ್ದ ಚಾಸಾ–1 ರವರ ಕೆಎ–02–ಇಆರ್–8051 ರ ಸಿಟಿ 100 ಬೈಕಿಗೆ ಕಲ್ಲಿನಿಂದ ಹೊಡೆದು ಬೈಕ್ ಜಖಂಗೊಂಡು 300 ರೂಪಾಯಿ ನಷ್ಟ ಉಂಟು ಮಾಡಿರುತ್ತಾರೆ, ಚಾಸಾ–1 ರವರಿಗೆ ಕೈಯಿಂದ ಮೈಕೈಗೆ ಹೊಡೆದು ನಂತರ ದೊಣ್ಣೆಯಿಂದ ಎಡಕೈಗೆ, ಬಲಕಾಲಿಗೆ, ಬೆನ್ನಿಗೆ ಹೊಡೆದು ನೋವುಂಟು ಮಾಡಿದ್ದು, ಚಾಸಾ–1 ರವರಿಗೆ ಮಗನೇ ಮುಂದೆ ಸಿಕ್ಕು ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುವುದು ತನಿಖೆಯಿಂದ ದೃಡಪಟ್ಟಿದ್ದರಿಂದ ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳ ರೀತ್ಯಾ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ನಂತರ ಚಾಸಾ–1 ರವರು ಸಲ್ಲಿಸಿದ ದೂರಿನ ಆಧಾರದಲ್ಲಿ ಆಲೂರು ಪೋಲೀಸರು ತಮ್ಮ ಠಾಣಾ ಗುನ್ನಾ ನಂಃ191/2022 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ 427, 323, 324, 506 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**4.** ಆರೋಪಿಯು ಜಾಮೀನಿನ ಮೇಲಿರುತ್ತಾರೆ. ಆದೇಶಿಕೆ ಜಾರಿಯಾದ ನಂತರ ನ್ಯಾಯಾಲಯದ ಮುಂದೆ ಹಾಜರಾದ ಆರೋಪಿಗೆ ಪ್ರಕರಣದ ದಾಖಲೆಗಳ ನಕಲುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಒದಗಿಸಲಾಗಿದೆ. ಆರೋಪಿಯು ಅವರ ವಿರುದ್ಧದ ದೋಷಾರೋಪಣೆಯನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಚಾಸಾ–1ರವರನ್ನು ವಿಚಾರಣೆ ಮಾಡಿಕೊಂಡಿರುತ್ತದೆ.

**5.** ನ್ಯಾಯಾಲಯವು ಕಡತವನ್ನು ಪರಿಶೀಲಿಸಿದಾಗ ಆರೋಪಿಯ ವಿರುದ್ಧ ಯಾವುದೇ ಸೂಕ್ತವಾದ ಪ್ರಚೋದನಕಾರಿ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದು ಕಂಡುಬಂದಿರುವುದರಿಂದ ದಂಡ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ಪಡೆದುಕೊಳ್ಳುವುದನ್ನು ಕೈ ಬಿಡಲಾಗಿದೆ.

**6.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿಯ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

**7. ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ**

**1.** ದಿಃ 21.07.2022 ರಂದು ಸಂಜೆ 5.30 ಕ್ಕೆ ಇಮ್ಮಟಿಪುರ ಗ್ರಾಮದ ಚಾಸಾ–1 ರವರ ಮನೆಯ ಮುಂಭಾಗದಲ್ಲಿ ಆರೋಪಿಯಾದ ನೀವು ಚಾಸಾ–1 ರವರಿಗೆ ಬೋಳಿ ಮಗನೆ, ಸೂಳೆ ಮಗನೇ ಎಂದು ಅವಾಚ್ಯ ಶಬ್ದದಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ತರುವಷ್ಟರ ಮಟ್ಟಿಗೆ ಅವರನ್ನು ಕೊಪ್ರೋದ್ರಿಕ್ತಗೊಳಿಸಿರುತ್ತಾರೆ. ಆದ್ದರಿಂದ ಆರೋಪಿಯು

ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತಾರೆ, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 2 ಮತ್ತು 3ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ದೊಣ್ಣೆಯಿಂದ ಎಡಗೈ, ಬಲಗೈ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 324 ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರ ಕೆಎ-02-ಇಆರ್-8051 ದ್ವಿಚಕ್ರ ವಾಹನಕ್ಕೆ ಕಲ್ಲಿನಿಂದ ಹೊಡೆದು ಜಖಂ ಗೊಳಿಸಿ ರೂ.300/-ಗಳ ನಷ್ಟ ಉಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 427 ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರಿಗೆ ಮಗನೇ ಮುಂದೆ ಸಿಕ್ಕು ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹೇಳಿ ಕೊಲೆ ಬೆದರಿಕೆ ಹಾಕಿ, ಅಪರಾಧಿಕ ಜೀವ ಭಯ ಹುಟ್ಟಿಸಿರುತ್ತಾರೆ, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 506 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

6. ಏನು ಆದೇಶ?

7. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತಿವೆಃ

| | | |
|---|---|---|
| **ಅಂಶ 1ರಿಂದ 5** | : | **ನಕಾರಾತ್ಮಕವಾಗಿ** |
| **ಅಂಶ 6** | : | **ಅಂತಿಮ ಆದೇಶದಂತೆ** |

## ಕಾರಣಗಳು

8. **ಅಂಶ-1 ರಿಂದ 5**:-ಸಾಕ್ಷ್ಯ ಹಾಗೂ ಕಾರಣಗಳ ಪುನರಾವರ್ತನೆಯನ್ನು ತಡೆಯುವುದಕ್ಕೋಸ್ಕರ ಈ ಐದು ಅಂಶಗಳನ್ನು ನ್ಯಾಯಾಲಯವು ಒಟ್ಟಿಗೆ ಚರ್ಚಿಸಿರುತ್ತದೆ.

ಅಭಿಯೋಜನೆಯು ಈ ಪ್ರಕರಣದ ಚಾಸಾ-1 ರವರನ್ನು ಫ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ಈ ಪ್ರಕರಣದ ಬಗ್ಗೆ ತಮಗೆ ಏನು ಗೊತ್ತಿರುವುದಿಲ್ಲ ಎಂದು ನುಡಿದಿದ್ದು, ಫ್ರಾಸಾ 1 ರವರು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು

ನಿಪಿ–1 ಎಂದು, ಅದರಲ್ಲಿ ಇರುವ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಗಿರುತ್ತದೆ ಮತ್ತು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**9.** ಫ್ರಾಸಾ–1 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಸಹಾಯಕ ಸರ್ಕಾರಿ ವಕೀಲರು ನ್ಯಾಯಾಲಯದ ಅನುಮತಿಯ ಮೇರೆಗೆ ಫ್ರಾಸಾ–1 ರವರನ್ನು ಪಾಟೀ ಸವಾಲು ಮಾಡಿದಾಗ ಫ್ರಾಸಾ–1 ರವರು ಆರೋಪಿ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ವಕೀಲರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅವರು ನಿರಾಕರಿಸಿರುತ್ತಾರೆ.

**10.** ನ್ಯಾಯಾಲಯವು ಫ್ರಾಸಾ–1 ರವರ ಸಂಪೂರ್ಣ ಸಾಕ್ಷ್ಯವನ್ನು ಪರಿಗಣಿಸಿ ನೋಡಿದಾಗ ಅಭಿಯೋಜನೆಯು ಆರೋಪಿಯ ವಿರುದ್ಧ ಮಾಡಿದ ಆರೋಪಣೆಯನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಹಾಗೂ ಫ್ರಾಸಾ–1 ರವರು ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ ಅಭಿಯೋಜನೆಯು ಭಾರತೀಯ ದಂಡ ಸಂಹಿತೆಯ ಕಲಂ 504, 427, 323, 324 ಮತ್ತು 506 ರಡಿಯಲ್ಲಿನ ಘಟಕಾಂಶಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯು ಅಪರಾಧ ಮಾಡಿದ್ದಾರೆಂದು ಹೇಳುವಷ್ಟರ ಮಟ್ಟಿಗೆ ಯಾವುದೇ ಸಾಕ್ಷ್ಯಾಧಾರ ಇಲ್ಲದಿರುವುದರಿಂದ ಈ ನ್ಯಾಯಾಲಯವು ಮೇಲೆ ಹೇಳಿದ 1 ರಿಂದ 5 ಅಂಶಗಳನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತದೆ.

11. **ಅಂಶ ನಂ.6:-** ಮೇಲೆ ಹೇಳಿದ ವಸ್ತುಸ್ಥಿತಿ ಹಾಗೂ ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**ಆ ದೇ ಶ**

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1) ರನ್ವಯ ಆರೋಪಿಯನ್ನು ಭಾರತೀಯ ದಂಡ ಸಂಹಿತೆಯ ಕಲಂ 504, 427, 323, 324 ಮತ್ತು 506 ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ಅಡಿಯಲ್ಲಿ ಆರೋಪಿತರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮುಂದಿನ 6 ತಿಂಗಳುಗಳವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು, ನಂತರ ಆರೋಪಿಯು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

ಪಿ.ಎಫ್.ಸಂಖ್ಯೆ:191/2022 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಒಂದು ಕಾಡು ಜಾತಿಯ ದೊಣ್ಣೆ ಮತ್ತು ಕಲ್ಲನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

*(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಉಕ್ತಲೇಖಿಸಿ ಅವರು ಅದನ್ನು ಲಿಪ್ಯಂತರ ಮಾಡಿದ ನಂತರ ನಾನು ತಿದ್ದಿ ಸಹಿ ಮಾಡಿ* ದಿನಾಂಕಃ **5ನೇ ಆಗಸ್ಟ್ 2025**ರ *ಈ ದಿನ ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿರುತ್ತೇನೆ)*

**(ಸ್ನೇಹ ಎಂ.)**
**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಆಲೂರು.**

**ಅನುಬಂಧ**

1. **ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ**

ಫ್ರಾಸಾ–1 : ರಮೇಶ್

2. **ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ**

–ಇಲ್ಲ–

3. **ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳುಃ**

ನಿಪಿ–1 : ದೂರು

ನಿಪಿ–2 : ಹೇಳಿಕೆ

4. **ಆರೋಪಿತರ ಪರ ಗುರುತಿಸಲಾದ ದಾಖಲೆಗಳುಃ**

– ಇಲ್ಲ–

5. **ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳುಃ**

– ಇಲ್ಲ –

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಆಲೂರು.**